ಶ್ರೀವಾದಿರಾಜಗುರುಭ್ಯೋ ನಮಃ
ಶ್ರೀ ಶ್ರೀಪಾದರಾಜಗುರುಭ್ಯೋ ನಮಃ
ಶ್ರೀವ್ಯಾಸರಾಜಗುರುಭ್ಯೋ ನಮಃ

## ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು

ರಾಗ: ಪಂತುವರಾಳಿ ಆದಿತಾಳ

ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು
ವ್ಯಾಸಮುನಿರಾಯರ ಸಂನ್ಯಾಸದಿರವ ॥ ಪ ॥
ಆಸೆಯಿಂದ ತಮ್ಮುದರ ಪೋಷಣಕಾಗಿ ಛಪ್ಪನ್ನ
ದೇಶವತಿರುತಿ ಸಂಚಾರ ಮಾಡುತಾ
ಮೀಸಲಮಡಿ ಬಚ್ಚಿಟ್ಟು ಮಿಂಚು ಕೂಳನುಂಡು ದಿನ
ಮೋಸಮಾಡಿ ಕಳೆವ ಸಂನ್ಯಾಸಿಗಳ ಸರಿಯೇ ॥ 1 ॥
ಕೆರೆ ಭಾವಿ ಪುರ ಅಗ್ರಹಾರಂಗಳ ಸರಿಯೇ
ಸುರರೊಂದು ಲಕ್ಷ ಕುಟುಂಬಗಳ
ಪೊರವ ವೈಭವ ಕೀರ್ತಿಯಿಂದಲಿ ವ್ಯಾಸರಾ
ಯರ ಗುಣಗಣ ಗಾಂಭೀರ್ಯಾದಿಗಳ ॥ 2 ॥
ಹಗಲಿರುಳೆನ್ನದೆ ಆವಾಗ ಶ್ರೀಹರಿ ಪದಪದ್ಮ
ಯುಗಳವನರ್ಚಿಸಿ ಭಕುತಿಯಿಂದ
ರಘುಪತಿಭಜಕ ಬ್ರಹ್ಮಣ್ಯತೀರ್ಥರ ಕುವರ
ರಂಗವಿಠಲನನ್ನು ಬಿಡೆಬೆಡನು ಎಂಬ ॥ 3 ॥

## ಶ್ರೀವ್ಯಾಸರಾಯರ ಸ್ತೋತ್ರಪದ

ರಾಗ - ನಾಟಿ ಝಂಪೆತಾಳ

ವಾಸುದೇವನ ಚರಣವನಜವಂದಿತನೆ। ಸಂ-
ನ್ಯಾಸಿರತ್ನಾಕರನೆ ವ್ಯಾಸಮುನಿರಾಯ ॥ ಪ ॥
ವಾದಿಗಜಸಿಂಹ ದುರ್ವಾದಿಮೃಗಭೇರುಂಡ
ವಾದಿಫಣಿಗರುಡ ತತ್ವಾದಿರಚಿತ
ವಾದಿ-ಭಯಂಕರ ದುರ್ವಾದಿಕೋಲಾಹಲ
ವಾದಿಮಸ್ತಕಶೂಲ ಮಧುರಗುಣಶೀಲ ॥ 1 ॥
ವೈಷ್ಣವೋತ್ತಮನೆ ಸದ್ವೈಷ್ಣವವ್ರಜಾನಂದ
ವೈಷ್ಣವಾಗಮಭರಿತ ವೈಷ್ಣವಸುಪ್ರೀತ
ವೈಷ್ಣವಕಮಲಸೂರ್ಯ ವೈಷ್ಣವಕುಮುದಚಂದ್ರ
ವೈಷ್ಣವಕುಲೋತ್ಕೃಷ್ಟ ವೈಷ್ಣವವಿಶಿಷ್ಟ ॥ 2 ॥
ಹರಿಯಿಲ್ಲದನ್ಯತ್ರ ಚರಿಸದ ಮಹಾಮಹಿಮ

ಸಿರಿಕೃಷ್ಣಚರಣಸರಸೀರುಹಕೆ ಭೃಂಗ
ಗುರುಪುರಂದರವಿಟ್ಠಲನೆ ಪರದೈವವೆಂ-
ದರುಹಿ ಸುಜನರ ಪೊರೆವ ವ್ಯಾಸಮುನಿರಾಯ ॥ 3 ॥

## ವ್ಯಾಸರಾಯರ ಚರಣ ಕಮಲ

### -ಸುಳಾದಿ-

ವ್ಯಾಸರಾಯರ ಚರಣ ಕಮಲ ದರ್ಶನ ವೆನ
ಗೇಸುಜನ್ಮದ ಸುಕೃತ ಫಲದಿ ದೊರಕಿತೊ ಎನ್ನ
ಸಾಸಿರಕುಲಕೋಟಿ ಪಾವನ್ನವಾಯಿತು
ಶ್ರೀಶನ ಭಜಿಸುವುದಕಧಿಕಾರಿ ನಾನಾದೆ
ದೋಷರಹಿತನಾದೆ ಪುರಂದರವಿಠಲನ್ನ
ದಾಸರ ಕರುಣವು ಎನ್ನ ಮೇಲಿರಲಾಗಿ ॥ 1 ॥

ಗುರು ಉಪದೇಶ ವಿಲ್ಲದ ಜ್ಞಾನವು
ಗುರು ಉಪದೇಶ ವಿಲ್ಲದ ಸ್ನಾನವು
ಗುರು ಉಪದೇಶ ವಿಲ್ಲದ ಧ್ಯಾನವು
ಗುರು ಉಪದೇಶ ವಿಲ್ಲದ ಜಪವು
ಗುರು ಉಪದೇಶ ವಿಲ್ಲದ ತಪವು
ಗುರು ಉಪದೇಶ ವಿಲ್ಲದ ಮಂತ್ರ
ಗುರು ಉಪದೇಶ ವಿಲ್ಲದ ತಂತ್ರ
ಉರಗನ ಉಪವಾಸದಂತೆ ಕಾಣಿರೋ
ಗುರು ವ್ಯಾಸರಾಯರು ಕರುಣದಿಂದಲಿ ಎನಗೆ
ಪುರಂದರ ವಿಠಲನೆ ಪರನೆಂದು ಅರುಹಿ
ದುರಿತದ ಭಯವೆಲ್ಲ ಪರಿಹರಿಸಿದರಾಗಿ ॥ 2 ॥

ಅಂಕಿತವಿಲ್ಲದ ದೇಹ ನಿಷೇಧ
ಅಂಕಿತವಿಲ್ಲದ ಕಾಯ ಶೋಭಿಸದು
ಅಂಕಿತವಿಲ್ಲದಿರಬಾರದೆಂದು ಚ
ಕ್ರಾಂಕಿತವನ್ನು ಮಾಡಿ ಎನ್ನಂಗಕ್ಕೆ
ಪಂಕಜನಾಭ ಶ್ರೀಪುರಂದರವಿಠಲ ನ
ಅಂಕಿತವೆನಗಿತ್ತ ಗುರು ವ್ಯಾಸ ಮುನಿರಾಯ ॥ 3 ॥

ನ್ಯಾಯಾಮೃತ ತರ್ಕತಾಂಡವ ಚಂದ್ರಿಕೆ ಮೊದಲಾದ
ನ್ಯಾಯ ಗ್ರಂಥದ ರಚಿಸಿ ತನ್ನ ಭಕ್ತರಿಗಿತ್ತು
ಮಾಯವಾದಿ ಮೊದಲಾದ ಇಪ್ಪತ್ತೊಂದು ಕುಭಾಷ್ಯರ

ಬಾಯಿ ಮುದ್ರಿಸಿದ ಮಧ್ವರಾಯರ ಕರುಣದಿಂದ
ಶ್ರೀಯರಸ ಪುರಂದರ ವಿಠಲನ್ನದಾಸರೊಳು
ನಾಯಕನೆಂದೆನಿಸಿ ಗುರುವ್ಯಾಸ ಮುನಿರಾಯ II 4 II

ಶೇಷಾವೇಶ ಪ್ರಹ್ಲಾದ ನವತಾರವೆನಿಸಿದೆ
ವ್ಯಾಸರಾಯನೆಂಬೊ ಪೆಸರು ನಿನಗಂದಂತೆ
ದೇಶಾಧಿಪಗೆ ಬಂದ ಕುಹಯೋಗವನು ನೂಕಿ
ನೀ ಸಿಂಹಾಸನವೇರಿ ಮೆರೆದೆ ಜಗವರೆಯೆ
ವ್ಯಾಸಾಬ್ಧಿಯನು ಬಿಗಿಸಿ ಕಾಶಿ ದೇಶದೊಳೆಲ್ಲ
ಭಾಸುರ ಕೀರ್ತಿಯನು ಪಡೆದೆ ನೀ ಗುರುರಾಯ
ವಾಸುದೇವ ಪುರಂದರ ವಿಠಲನ್ನ ದಾಸರೊಳು
ಲೇಶ ನಿನ್ನಂತೆ ವೆಗ್ಗಳರ ಕಾಣೆನು ನಾನು
ಸಿರಿ ನಾರಾಯಣ ಯೋಗಿ ಶ್ರೀಪಾದರಾಯರಲ್ಲಿ
ವರ ವಿದ್ಯಾಭ್ಯಾಸವಮಾಡಿದೆ ನೀನು
ಧರೆಯೊಳು ವಿಜಯೀಂದ್ರ ವಾದಿರಾಜರೆಂಬ
ಪರಮ ಶಿಷ್ಯರ ಪಡೆದು ಮೆರೆದೆ ಕೀರುತಿಯಲ್ಲಿ
ಸುರೇಂದ್ರರು ಪುತ್ರಭಿಕ್ಷವ ಬೇಡೆ ವಿಜಯೀಂದ್ರ
ಕರುಣಿಸಿ ಮಠವನುದ್ಧರಿಸಿದ ಕಾರಣ
ಗುರುವ್ಯಾಸರಾಯರೆ ಪರಮ ಗುರುಗಳು
ಪುರಂದರ ವಿಠಲ ಪರದೈವ ಜಗಕೆ ಕಾಣಿರೊ II 5 II

ವರ ಮಧ್ವಮತವೆಂಬೊ ಸಾಗರದೊಳು ಅವ
ತರಿಸಿದೆ ಪೂರ್ಣ ಚಂದ್ರಮನಂತೆ ನೀನು
ಧರೆಯೊಳು ಬ್ರಹ್ಮಣ್ಯರ ವರ ಕುವರನೆಂದೆನಿಸಿದೆ ನೀನು
ಪುರಂದರ ವಿಠಲನ್ನ ಕರುಣಾಕರ ಕರುಣವ ಪಡೆದೆ
ಪರನೆಂದು ಅರುಹೆ ದುರಿತಗಳೆಲ್ಲ ಪರಿಹರಿಸಿಕೊಂಡೆ ನಾನು II 6 II

ಈಸು ಮುನಿಗಳು ಇದ್ದೇನು ಮಾಡಿದರಯ್ಯ
ವ್ಯಾಸಮುನಿ ಮಧ್ವಮತವನುದ್ಧರಿಸಿದ
ಕಾಶಿಗದಾಧರ ಮಿಶ್ರನಕೂಡ ವಾದವ ಮಾಡಿ ಸೋಲಿಸಿ
ದಾಸನ್ನ ಮಾಡಿಕೊಂಡೆ ಧಾರುಣಿಯೊಳು
ಕಾಶಿ ಮಿಶ್ರ ಪಕ್ಷದರ ವಾಜಪೇಯ ಲಿಂಗಣ್ಣ ವಿ
ದ್ವಾಂಸರು ನೂರೆಂಟು ಮಂದಿ ಬರಲು
ಜೈಸಿದೆ ಜಯಪತ್ರಿಕೆಯ ಕೊಂಡು ಮೆರೆದೆ
ವಾಸುದೇವ ಗೋಪಾಲ ಕೃಷ್ಣಗೆ ವಿ

ಭೂಷಣ ಮಾಡಿ ಹಾಕಿಸಿದೆ
ಶ್ರೀಶ ಪುರಂದರ ವಿಠಲನ್ನ
ಈಶ ಬೊಮ್ಮ ಇಂದ್ರಾದಿಗಳಿಗೆ
ಈಶನೆಂದು ಡಂಗುರ ಪೋಯಿಸಿ ಮೆರೆದೆ ಜಗವರಿಯೆ
ದಾಸರೊಳು ನೀ ಸಮರ್ಥನು ಸನ್ಯಾಸಿ ಶಿರೋಮಣಿ || 6 ||

ಮಾನಸ ಪೂಜೆಯಿನ್ನು ನೀ ಮಾಡೆ
ದಾನವಾಂತಕ ರಂಗನು ಮೆಚ್ಚಿ
ತಾನೆ ಬಂದ ಗೋಪಾಲ ಕೃಷ್ಣ
ಜ್ಞಾನಿಗಳರಸನೆ ಗುರುವ್ಯಾಸರಾಯ
ಏನೆಂಬನು ನಿನ್ನ ಮಹಿಮೆಯನು
ಶ್ರೀನಿವಾಸ ಪುರಂದರ ವಿಠಲನ
ಗಾನವ ಮಾಡುತ ಆಡುತ ಪಾಡುತ
ಏನಂಬೆ ನಿಮ್ಮ ಮಹಿಮೆಯನವನಾವನು ಬಲ್ಲನು || 7 ||

ಜತೆ
ಗುರುವ್ಯಾಸರಾಯರ ಚರಣವೆನಗೆಗತಿ
ಪುರಂದರ ವಿಠಲನ ಅರಿತೆ ಇವರಿಂದ || 8 ||

## ನವವೃಂದಾವನದಿ ವಿರಾಜಿಪ ಯತಿ

ರಾಗ: ಮೋಹನ ತಾಳ : ಆದಿ
ನವವೃಂದಾವನದಿ ವಿರಾಜಿಪ ಯತಿ
ಪವಿಧರನ್ಯಾರೇ ಪೇಳಮ್ಮಾ || ಪ ||
ಕವಿಜನನಾಯಕ ಪವನಮತ ಸಮು
ದ್ಭವ ಅಭಿನವವ್ಯಾಸಾಯರ ಕಾಣಮ್ಮಾ || ಅ.ಪ ||
ಭೂಸಾಮ್ರಾಜ್ಯ ಮುದ್ರಾಸೀನದಿ ಬಹು ಭಾಸಮಾನನಿವನ್ಯಾರಮ್ಮಾ
ಕ್ಲೇಶಿತ ಕೃಷ್ಣಜನೇಶನ ಪೊರೆದು ಸಿಂ ಹಾಸನವೇರಿದನ್ಯಾರಮ್ಮಾ
ದೇಶಾಡಳಿತ ಸದ್ವ್ಯಾಸಂಗದಿ ದಿ ಗ್ದೇಶದಿ ಮೆರೆದವನ್ಯಾರಮ್ಮಾ
ಭಾಸುರಮಂತ್ರೋಪದೇಶದಿಂದ ಭಕ್ತರಾಸೆ ಪೂರೈಸುವ ವ್ಯಾಸತೀರ್ಥರೇ || 1 ||
ಫಲಮಂತ್ರಾಕ್ಷತೆ ಒಲಿದರೆ ಹಾಲಾ ಹಲಕಲಿಕುಲಕಿವನ್ಯಾರಮ್ಮಾ
ಜಲಧಿ ಬಿಗಿದ ಬುಧಜಲಜಾರ್ಕವಿದ ಗ್ದಲಲಾಮನ್ಯಾರಮ್ಮಾ
ಖಳಹಿರಣ್ಯಜ ಲಂಕಾಪಾಲನನುಜ ನೃಪ ಬಾಲ್ಹೀಕಾನಿವನ್ಯಾರಮ್ಮಾ
ಇಳೆಯೊಳು ಮುಂದೆ ಮಂತ್ರಾಲಯದೊಳು ಯತಿ ಕುಲತಿಲಕ ನೆನಿಸಿದಾ ಫಲಪ್ರದನಮ್ಮಾ || 2 ||
ಚಂದ್ರಿಕಾರ್ಯ ವಿಜಯೀಂದ್ರ ಸ್ವಾದೀಶಪುರಂದರಾರ್ಯರ ಗುರುವ್ಯಾರಮ್ಮಾ

ಅಂದಣಗಜ ಧ್ವಜ ಕುಂದಣ ಬಿರುದುಗಳಿಂದೆಸೆವನು ಇವನ್ಯಾರಮ್ಮಾ
ನಂದತೀರ್ಥರಮತ ಸಿಂಧುಶಶಾಂಕ ಮಾಯಾಂಧದಿನೇಶನ್ಯಾರಮ್ಮಾ
ತಂದೆವೆಂಕಟೇಶವಿಠ್ಠಲನೊಲುಮೆಯೊಳು ಬಂಧವಳಿದ ವ್ಯಾಸೇಂದ್ರಕಾಣಮ್ಮಾ ॥ 3 ॥

## ಶ್ರೀವಿಜಯದಾಸರಾಯರಿಂದ ವಿರಚಿತ

## ಶ್ರೀವ್ಯಾಸರಾಯರ ಸ್ತೋತ್ರಪದ

### ವ್ಯಾಸರಾಯರ ಸ್ಮರಿಸಿರೋ

ರಾಗ - ನಾಟಿ ಝಂಪೆತಾಳ

ವ್ಯಾಸರಾಯರ ಸ್ಮರಿಸಿರೋ ॥ ಪ ॥
ವ್ಯಾಸರಾಯರ ಸ್ಮರಿಸಿ ಏಸುಜನ್ಮದ ಪಾಪ
ನಾಶವಾಗುವುದು ನಿಮ್ಮಾಸ್ತೆ ಸಿದ್ಧಿಸುವುದು
ಲೇಸಾಗಿ ಸುಖಿಸಿ ಆನಂದವೈಕುಂಠದಲಿ ವಾಸವಾಗುವುದು ನಿಜಭಕುತಿಯಲ್ಲಿ॥ ಅ. ಪ ॥
ಪಿತನಿಂದನೊಂದು ರತಿಪತಿಪಿತನ ಸ್ಮರಿಸುತ
ಪ್ರತಿಬಂಧಕಗಳಪ್ರತಿಯಾಗಿ ಬಂದಿರಲು
ಅತಿವೇಗದಿಂದ ಪಾರಂಗತನಾಗಿ ಬಲುಮತಿವಂತನಾಗಿ ಮುದದಿ।
ಕ್ಷಿತಿಯ ಭಾರವ ವೊಹಿಸಿ ಕ್ರತುಭುಜಮುನೀಶ್ವರನ
ಸ್ತುತಿಸುತಾಲಿದ್ದು ಮಿತಿಕಾಲಹಿಂಗಳದು
ಸುತಗೆ ರಾಜ್ಯವನಿತ್ತು ಕೃತಕಾರ್ಯನಾಗಿ ಅಚ್ಯುತನ ವರದಿಂದಲಂದು ॥ 1 ॥
ಅಲ್ಲಿ ತ್ರಿನೇತ್ರ ಶ್ರೀವಲ್ಲಭನ ಶ್ರೀಪಾದ
ಪಲ್ಲವಾರುಣಚಿತ್ತದಲ್ಲಿ ಪ್ರತಿದಿವಸದಲಿ
ನಿಲ್ಲಿಸಿ ನಿಗಮಾರ್ಥದಿಂದ ಪೂಜಿಸುತ್ತಿದ್ದು ಬಲ್ಲಭಕುತಿಂದ ಸತತ ॥
ಖುಲ್ಲನಲಿ ಪುಟ್ಟಿದಾಪ್ರಲ್ಹಾದದೇವನು
ಬಲ್ಲಿದಾನಾಗೆಲ್ಲ ಸಂಸಾರನುತ್ತರಿಸಿ
ಎಲ್ಲ ಕಾಲದಲಿ ಇರುತಿರಲು ನಾರದಮುನಿ ಮೆಲ್ಲನೇ ನಡೆತಂದನಲ್ಲಿ ॥ 2 ॥
ಬಂದ ನಾರದಗೆ ಪ್ರಲ್ಹಾದದೇವನು ಎರಗಿ
ನಿಂದು ಕರಗಳ ಮುಗಿದು ತ್ರಾಹಿತ್ರಾಹಿ ಎಂದು
ಒಂದೊಂದು ಬಗೆಯಲ್ಲಿ ಕೊಂಡಾಡಿ ಬೆಸಗೊಂಡು ಇಂದು ನಿಮ್ಮಯ ದರುಶನ ॥
ಚಂದವಾಯ್ತೆನಗೆ ಎತ್ತಲಿಂದ ಬಂದಿರಿ ಇತ್ತ
ಬಂದ ವಿಚಾರಪೇಳೆಂದು ಬಿನ್ನೈಸಲು
ವೃಂದಾರಕಮುನಿ ನುಡಿದ ಕೃಷ್ಣನ ಮಹಿಮೆ ನಂದದಲಿ ಹಾಹಾ ಎನ್ನುತ ॥ 3 ॥
ವೃಕೋದರನಿಂದ ದೇಹವನು ಬಿಡುವಾಗ ಬಾ-
ಲ್ಹಿಕರಾಯನಾಗಿ ಪುಟ್ಟಿದ್ದ ಪ್ರಲ್ಹಾದನು
ಉಕುತಿಯಿಂದಲಿ ಪೊಗಳಿ ವರಬೇಡಿದನು ವೈದಿಕಮಾರ್ಗವನ್ನೇ ಧರಿಸಿ ॥
ಮುಕುತಿಯನು ಸಾಧಿಸಿ ಕಲಿಯೊಳಗೆ ನಿಮ್ಮ ಪೂ-
ಜಕನಾಗಿ ಬಾಳಿಪ್ಪೆನೆಂದು ತಲೆವಾಗಲು

ಭಕುತಿಗೆ ಮೆಚ್ಚಿಸಲೆ ಅಂದ ಮಾತಿಗೆ ಇಂದು ಪ್ರಕಟವಾಯಿತು ಧರೆಯೊಳು ॥ 4 ॥
ದಿಕ್ಕುಂಗಳಂ ಮರೆದು ಧಿಗಿಧಿಗಿನೆ ಚಿಗಿದಾಡುತ್ತ
ಉಕ್ಕಿದವು ಕಣ್ಣಿಂದ ಅಶ್ರುಜಲಧಾರೆ ತಾ-
ರಕ್ಕಿಯಂದದಿ ಪೊಳವುತಿರಲು ಮೈಮರೆದು ದೇವಕ್ಕಿನಂದನನ ನೆನೆದು ।
ನಕ್ಕು ಕಿಲಿಕಿಲಿ ರಹಸ್ಯಗಳನುಚ್ಚರಿಸುತ
ತಕ್ಕೈಸಿ ತಿಳುಪಿದನು ಮುಂದಣಾಗಮವೆಲ್ಲ
ಇಕ್ಕೆಲದವರು ಸಹ ಕೇಳಲಾವೃತ್ತಾಂತ ಅಕ್ಕಟದ್ಭುತವೇನೆಂಬೆ ॥ 5 ॥
ಬನ್ನೂರುಗ್ರಾಮದಲಿ ಜನಿಸಿದನು ಭೂಸ್ಪುರುಶ
ಮುನ್ನಿಲ್ಲದೇ ಮುದದಿಬೆಳದು ಮುನಿಸುಬ್ರಾಹ್ಮ-
ರನ್ನು ಪಾಲಿಸುವ ಪರಮಾನಂದಉಳ್ಳ ಬ್ರಹ್ಮಣ್ಯತೀರ್ಥರ ಕರದಿ ॥
ಚೆನ್ನಾಗಿ ಪೋಷಿಸಿಕೊಂಡು ಉಪನೀತನಾಗಿ
ಸನ್ನ್ಯಾಸಪಟ್ಟವನೆ ಧರಿಸಿ ಧರ್ಮದಲಿ ಸ-
ತ್ಪುಣ್ಯಶ್ರೀಪಾದರಾಯರಲ್ಲಿ ವಿದ್ಯವನೋದಿ ಧನ್ಯ ಕೀರ್ತಿಯಲಿ ಮೆರೆದ ॥ 6 ॥
ರಾಯಗದ್ದುಗೆನೇರಿ ಅವನಿಗೆ ಬಂದ ಮಹಕು-
ಹುಯೋಗವ ನೂಕಿ ರಾಜ್ಯದೊಳಗೆ ಇದ್ದು
ಮಾಯಿಗಳ ಮರ್ದಿಸಿ ಮುದದಿಂದ ಸೂವರ್ನಛಾಯದಂತೆ ಕಾಂತಿಲಿ ।
ನ್ಯಾಯಾಮೃತ-ತರ್ಕತಾಂಡವ -ಚಂದ್ರಿಕೆ ಎಂಬ
ನ್ಯಾಯಗ್ರಂಥವ ರಚಿಸಿ, ದೇಹಹಂಬಲತ್ಯಜಿಸಿ
ಶ್ರೀಯರಸನೊಲಿಸಿ ನಾನಾವಿಧದಿ ಪೂಜಿಸಿ ಸ್ಥಾಯವಾದರು ಪೊಂಪದಿ ॥ 7 ॥
ಯಂತ್ರೋದ್ಧಾರಕನ ಪ್ರತಿಷ್ಠಿಸಿ, ವಿಜಯೀಂದ್ರ
ಸಂತವಾದಿರಾಜಗೊಲಿದು, ಪುರಂದರ
ಇಂತು ಶಿಷ್ಯರನು ಪಡೆದು ಉಪದೇಶಿಸಿ ಮಂತ್ರಸಿದ್ಧಯನೆ ಕೊಟ್ಟು॥
ಭ್ರಾಂತಗೊಳಿಸುವ ಮಹಾ ಅನ್ಯಾಯಮತವೆಂಬ
ಕಾಂತಾರಪಾವಕನೆ , ವ್ಯಾಸಾಬ್ಧಿಯನೆ ಬಿಗಿದು
ಶಾಂತನಿಸ್ಸೀಮನೆನಿಸಿದ ಯತಿಶಿರೋರನ್ನ ಚಿಂತಿತಫಲದಾಯಕ ॥ 8 ॥
ಮಧ್ವಮತವೆಂಬ ದುಗ್ಧಾಬ್ಧಿಗೆ ಪೂರ್ಣೇಂದು
ಹೃದ್ವನಜದೊಳಗಿರಿಸಿ ಕೃಷ್ಣನ ಪದಾಂಬುಜವ
ಚಿದ್ವಾಕ್ಯದಲಿ ನಿಲಿಸಿ ಕಾವ್ಯದಲಿ ಕೊಂಡಾಡಿ ಸದ್ವೀರವೈಷ್ಣವರಿಗೆ ।
ಪದ್ಧತಿಯನು ಪೇಳಿ ತವಕದಿಂದಲಿ ತಾವು
ಸದ್ವೈಷ್ಣವಲೋಕಸಿರಿಮರಳೆಐದಿದರು
ಮಧ್ವವಲ್ಲಭ ನಮ್ಮ ವಿಜಯವಿಠ್ಠಲನ ಪಾದದ್ವಯವ ಭಜಿಸುವರು ಕೇಳಿ ॥ 9 ॥

॥ ಶ್ರೀವ್ಯಾಸರಾಜರಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮದ್ವೇಶಾರ್ಪಣಮಸ್ತು ॥